

# ಬಾನಾಡಿಗಳಿಗೊಂದು ದವಾಖಾನೆ

**ದೆಹಲಿಯ ಕೆಂಪು ಕೋಟೆ ಸಮೀಪದಲ್ಲಿರುವ 'ಪಕ್ಷಿಗಳ ಆಸ್ಪತ್ರೆ' ಜೈನ ಧರ್ಮೀಯರ ಸೇವಾ ಮನೋಭಾವದಿಂದ ನಡೆಯುತ್ತಿದೆ. ವಿವಿಧ ಕಾರಣಗಳಿಂದ ಅನಾರೋಗ್ಯಕ್ಕೆ ತುತ್ತಾಗುವ ಪಕ್ಷಿಗಳಿಗೆ ಈ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಲಭ್ಯ. ಶತಮಾನೋತ್ಸವದತ್ತ ದಾಪುಗಾಲಿಡುತ್ತಿರುವ ಬಾನಾಡಿಗಳ ಚಿಕಿತ್ಸಾಲಯ, ದೇಶದ ರಾಜಧಾನಿಯಲ್ಲಿ ಮಾನವೀಯ ಆಸಕ್ತಿಯ ಕೇಂದ್ರಗಳಲ್ಲೊಂದು.**

■ ಪದ್ಮಿನಿ ನಾಗರಾಜು

ಪ್ರತಿ ವರ್ಷದ ಆಗಸ್ಟ್ 15ರಂದು ದೆಹಲಿಯ ಕೆಂಪು ಕೋಟೆಯಲ್ಲಿ ಸ್ವಾತಂತ್ರ್ಯದ ಬಣ್ಣಗಳು ತುಂಬಿಕೊಳ್ಳುತ್ತವೆ. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ದೆಹಲಿಯ ಕೆಂಪು ಕೋಟೆಯಲ್ಲಿ (ರೆಡ್ ಫೋರ್ಟ್, ಲಾಲ್ ಕಿಲಾ) 1947ರ ಆಗಸ್ಟ್ 15ರಂದು ಭಾರತದ ಮೊದಲ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಅವರು ಐತಿಹಾಸಿಕ ಭಾಷಣ ಮಾಡಿದರಷ್ಟೇ. ಅಂದಿನಿಂದ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ದೇಶದ ಪ್ರಧಾನಮಂತ್ರಿಗಳು ಕೆಂಪು ಕೋಟೆಯಿಂದ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡುವುದು ಸಂಪ್ರದಾಯವಾಗಿದೆ.

ಬ್ರಿಟಿಷರ ಸುದೀರ್ಘ ಆಳ್ವಿಕೆಯಲ್ಲಿ ನಲುಗಿದ್ದ ಭಾರತೀಯರಿಗೆ 1947ರ ಆಗಸ್ಟ್ 15 ದಾಸ್ಯದಿಂದ ಮುಕ್ತವಾದ ದಿನ. ಸ್ವಚ್ಛಂದವಾಗಿ ಬದುಕುವ ದಿನವಾಯಿತು. ತನ್ನಿಷ್ಟದಂತೆ ರೆಕ್ಕೆ ಬಿಚ್ಚಿ ಬದುಕುವ ಆಸೆ ಪ್ರತಿಯೊಬ್ಬರದು. ನೀಲ ಗಗನದಲ್ಲಿ ಸ್ವತಂತ್ರವಾಗಿ ತನ್ನ ರೆಕ್ಕೆಯನ್ನೇ ನಂಬಿ ಹಾರುವ ಬಾನಾಡಿಗೂ ಅದೇ ಆಸೆ. ಆದರೆ ಒಮ್ಮೊಮ್ಮೆ ಅವುಗಳೂ ಗಾಯಗೊಳ್ಳುತ್ತವೆ, ಗಾಸಿಗೊಳ್ಳುತ್ತವೆ. ಅಂತಹ ಪಕ್ಷಿಗಳಿಗಾಗಿಯೇ ಚಾಂದಿನಿ ಚೌಕದ ಕೆಂಪು ಕೋಟೆ ಬಳಿ ಚಿಕಿತ್ಸಾಲಯವೊಂದಿದೆ. ದೆಹಲಿಯನ್ನು ವೀಕ್ಷಿಸಲು ಹೋದವರು ಮರೆಯದೆ ನೋಡಬೇಕಾದ ಸ್ಥಳವಿದು.

ವಿಶ್ವದಲ್ಲಿಯೇ ವಿಶಿಷ್ಟವಾಗಿರುವ, ದಾನಿಗಳಿಂದಲೇ ನಡೆಯುವ ಪಕ್ಷಿಗಳ ಆಸ್ಪತ್ರೆಯೊಂದು ತನ್ನ ಕಾರ್ಯಕ್ಷಮತೆಯಿಂದ ಬಾಯಿಲ್ಲದ ಬಾನಾಡಿಗಳ ನೆಲೆಯಾಗಿದೆ. ಜೈನಧರ್ಮದ ಮಹಾನ್ ಸಂತ ಮಹಾರಾಜ್ ಜಿ ಅವರ ಆಶಯದಂತೆ ದೆಹಲಿಯ ಕಿನಾರಿ ಬಜಾರಿನಲ್ಲಿನ ಒಂದು ಸಣ್ಣ ಕೋಣೆಯಲ್ಲಿ 1929ರಲ್ಲಿ ಪಕ್ಷಿಗಳ ಆರೈಕೆಗಾಗಿ ಈ ಆಸ್ಪತ್ರೆ ಪ್ರಾರಂಭವಾಯಿತು. ಬಿಸಿಲು, ಚಳಿ, ವಾಹನಗಳ ಅಪಘಾತಕ್ಕೆ ಸಿಲುಕಿ ನಲುಗುತ್ತಿದ್ದ ಪಕ್ಷಿಗಳನ್ನು